# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1531(1879) |
| ಸದಸ್ಯರ ಹೆಸರು | ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 23.03.2026 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2024-2025 ಮತ್ತು 2025-26 ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಹಾವು ಕಡಿತ ಪ್ರಕರಣಗಳು ದಾಖಲಾಗಿವೆ; ಅದರಲ್ಲಿ ಎಷ್ಟು ಜನರು ಮೃತಪಟ್ಟಿದ್ದಾರೆ (ಜಿಲ್ಲಾವಾರು ಮಾಹಿತಿ ನೀಡುವುದು) | 2024 ಮತ್ತು 2025 ನೇ ಸಾಲಿನಲ್ಲಿ ರಾಜ್ಯದಲ್ಲಿ ದಾಖಲಾಗಿರುವ ಹಾವು ಕಡಿತ ಪ್ರಕರಣಗಳು ಹಾಗೂ ಮೃತಪಟ್ಟವರ ಸಂಖ್ಯೆಯು ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ | ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ಸಕಾಲಿಕ ಚಿಕಿತ್ಸೆ ಹಾಗೂ ಅಗತ್ಯವಿರುವ ಔಷಧ ಸಿಗದಿರುವುದರಿಂದ ಮೃತಪಟ್ಟವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ಸಕಾಲಿಕ ಚಿಕಿತ್ಸೆ ಹಾಗೂ ಅಗತ್ಯವಿರುವ ಔಷಧ ಸಿಗದಿರುವುದರಿಂದ ಮೃತಪಟ್ಟವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ<br><br>ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಕಾರ್ಯಕ್ರಮವು 2022 ರಲ್ಲಿ ಅನುಷ್ಠಾನಗೊಂಡಿದ್ದು ಕಾರ್ಯಕ್ರಮದ ಪ್ರಗತಿ ಹಾಗೂ ನಿಖರ ವರದಿಯನ್ನು ಪಡೆಯಲು ರಾಜ್ಯವು ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಹಾವು ಕಡಿತ ಪ್ರಕರಣಗಳನ್ನು ಹಾಗೂ ಹಾವು ಕಡಿತದಿಂದ ಸಂಭವಿಸುವ ಮರಣಗಳನ್ನು ದಿನಾಂಕ 12.02.2024 ರಂದು "ಘೋಷಿತ ಖಾಯಿಲೆ" ಎಂದು ಘೋಷಿಸಿ ಆದೇಶ ಹೊರಡಿಸಿರುವುದರಿಂದ, ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳು ಕಡ್ಡಾಯವಾಗಿ ಭಾರತ ಸರ್ಕಾರದ Integrated Health Information Platform (IHIP) ನಲ್ಲಿ ವರದಿ ಮಾಡುತ್ತಿರುತ್ತವೆ.<br><br>ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಕಾರ್ಯಕ್ರಮವು ರಾಜ್ಯದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಂಡಿರುವುದರಿಂದ ಸಾರ್ವಜನಿಕರಲ್ಲಿ ಹಾವು ಕಡಿತದ ಬಗ್ಗೆ ಅರಿವು ಮೂಡಿ, ಹೆಚ್ಚಿನ ಪ್ರಮಾಣದಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ವರದಿ ಮಾಡಿಕೊಂಡಿರುತ್ತಾರೆ.<br><br>ಈ ಹಿಂದೆ ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳ ವರದಿಯನ್ನು ದಾಖಲಿಸುವ ವ್ಯವಸ್ಥಿತವಾದ ಕ್ರಮವು ಇಲ್ಲದೇ ಇದ್ದುದರಿಂದ ತದನಂತರ ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳ ವರದಿಯನ್ನು ಕಡ್ಡಾಯವಾಗಿ ರಾಜ್ಯದಲ್ಲಿ ದಿನಾಂಕ 12.02.2024ರಿಂದ ಭಾರತ ಸರ್ಕಾರದ Integrated Health Information Platform (IHIP) ನಲ್ಲಿ ವರದಿ ಮಾಡಲು ಸೂಚನೆ ಇರುವುದರಿಂದ ದಾಖಲಾಗಿರುವ ಪ್ರಕರಣಗಳು ಬೆಳಕಿಗೆ ಬರುತ್ತಿರುವುದರಿಂದ ಅಂಕಿ-ಅಂಶಗಳ ವರದಿಯ ಆಧಾರದ ಮೇಲೆ ಪ್ರಮಾಣವು ಏರಿಕೆಯಾಗಿರುವುದು |

| | | |
|---|---|---|
| | | ಕಂಡುಬರುತ್ತದೆಯೇ ಹೊರತು ನೈಜ ಪ್ರಕರಣಗಳಲ್ಲಿ ಏರಿಕೆಯಾಗಿರುವುದಿಲ್ಲ.<br><br>ಹಾವು ಕಡಿತದಿಂದ ಸಂಭವಿಸಿರುವ ಮರಣಗಳನ್ನು ಪರಿಶೀಲಿಸಿದಾಗ ಅನೇಕ ರೋಗಿಗಳು ಚಿಕಿತ್ಸೆಗಾಗಿ ಸಕಾಲಕ್ಕೆ ಆಸ್ಪತ್ರೆಗೆ ತೆರಳದೆ ನಾಟಿ ಚಿಕಿತ್ಸಕರ ಹತ್ತಿರ ಚಿಕಿತ್ಸೆಗೆ ಹೋಗಿರುವುದರಿಂದ ಹೆಚ್ಚಿನ ಮರಣಗಳು ಸಂಭವಿಸಿರುತ್ತವೆ. ಕೆಲವು ಪ್ರಕರಣಗಳಲ್ಲಿ (ಕಟ್ಟು ಹಾವಿನಿಂದ ಕಡಿತ ಸಂಭವಿಸಿದಾಗ) ರೋಗಿಯು ಮಲಗಿದ್ದಾಗ ಹಾವು ಕಚ್ಚಿರುವುದರಿಂದ ರೋಗಿಗೆ ಹಾವು ಕಚ್ಚಿರುವ ಬಗ್ಗೆ ಮಾಹಿತಿಯೇ ಇಲ್ಲದೇ ತಡವಾಗಿ ಆಸ್ಪತ್ರೆಗೆ ಬಂದು ಆಸ್ಪತ್ರೆ ಸಿಬ್ಬಂದಿಗಳಿಗೆ ಹಾವು ಕಡಿತದ ಬಗ್ಗೆ ಮಾಹಿತಿ ನೀಡದೇ ಇರುವುದರಿಂದಲೂ ಮರಣಗಳು ಸಂಭವಿಸಿದೆ.<br><br>ಈ ಮೇಲ್ಕಂಡ ವಿಷಯದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಇಲಾಖೆಯು ಅನೇಕ IEC ಚಟುವಟಿಕೆಗಳನ್ನು ನಡೆಸುತ್ತಿದೆ. |
| ಇ | ಬಂದಿದ್ದಲ್ಲಿ, ಸಕಾಲದಲ್ಲಿ ಚಿಕಿತ್ಸೆ ಸಿಗದ ಕಾರಣದಿಂದ ಮತ್ತು ಇನ್ನೂ ಕೆಲವರು ಅಗತ್ಯವಿರುವ ಔಷಧ ಸಿಗದೆ ಮೃತಪಟ್ಟಿರುವುದಾಗಿ ವರದಿಯಾಗಿದ್ದು ಇದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು; | ಹಾವು ಕಡಿತದಿಂದ ಮೃತಪಡುವವರ ಸಂಖ್ಯೆಯನ್ನು ಗಣನೀಯವಾಗಿ ಇಳಿಸುವ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು:-<br><br>• ಕರ್ನಾಟಕ ರಾಜ್ಯವು ಈಗಾಗಲೇ ಎಲ್ಲಾ ಹಾವು ಕಡಿತ ಪ್ರಕರಣಗಳು ಮತ್ತು ಮರಣಗಳನ್ನು 2024 ರಲ್ಲಿ 'ಘೋಷಿತ ಖಾಯಿಲೆ' ಎಂದು ದೇಶದಲ್ಲೇ ಪ್ರಪ್ರಥಮ ಬಾರಿಗೆ ಘೋಷಿಸಿದೆ.<br>• ಎಲ್ಲಾ ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳನ್ನು ವರದಿ ಮಾಡುವುದು ಕಡ್ಡಾಯಗೊಳಿಸಲಾಗಿದೆ.<br>• ರಾಜ್ಯದಲ್ಲಿ ಈಗಾಗಲೇ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ Anti Snake Venom (ASV) ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ.<br>• ರಾಜ್ಯದ ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳನ್ನು 'ಹಾವು ಕಡಿತ ಚಿಕಿತ್ಸಾ ಕೇಂದ್ರಗಳಾಗಿ ಗುರುತಿಸಲಾಗಿದ್ದು, ಈ ಆಸ್ಪತ್ರೆಗಳಲ್ಲಿ ದಿನದ 24 ಗಂಟೆಯು ಹಾವು ಕಡಿತಕ್ಕೆ ಚಿಕಿತ್ಸೆ ಹಾಗೂ ಕಡಿತದಿಂದ ಉಂಟಾಗುವ ಬೇರೆ ಬೇರೆ ತೊಂದರೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.<br>• ವೈದ್ಯಾಧಿಕಾರಿಗಳು ಹಾಗೂ ಇತರೇ ಆರೋಗ್ಯ ಸಿಬ್ಬಂದಿಗಳಿಗೆ ವಿವಿಧ ಹಂತಗಳಲ್ಲಿ ಹಾವು ಕಡಿತ ಚಿಕಿತ್ಸೆಯ ಬಗ್ಗೆ ತರಬೇತಿಯನ್ನು ನೀಡಲಾಗಿದೆ.<br>• ಸಮುದಾಯದಲ್ಲಿ ಹಾವು ಕಡಿತ ನಿಯಂತ್ರಣ ಹಾಗೂ ತಡೆಗಟ್ಟುವಿಕೆಯ ಬಗ್ಗೆ ಅರಿವು ಮೂಡಿಸಲು ಹಾಗೂ ಹಾವು ಕಚ್ಚಿದ ತಕ್ಷಣ ಆಸ್ಪತ್ರೆಗೆ ಭೇಟಿ ನೀಡಲು ವಿವಿಧ ಇಲಾಖೆಗಳ ಸಹಯೋಗದೊಂದಿಗೆ IEC ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.<br>• ಹಾವು ಕಡಿತ ಮರಣಗಳಿಗೆ ಕಾರಣಗಳನ್ನು ತಿಳಿದು, ಮರಣಗಳನ್ನು ತಗ್ಗಿಸಲು ಎಲ್ಲಾ ಹಾವು ಕಡಿತದ ಮರಣ ಪ್ರಕರಣಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ Death Audit ನಡೆಸಲಾಗುತ್ತಿದೆ. |

| | | |
|---|---|---|
| | | • ಸಾಂಪ್ರದಾಯಿಕ/ನಾಟಿ ಚಿಕಿತ್ಸಕರಿಂದ ಹಾವು ಕಡಿತ ಪ್ರಕರಣಗಳು ಆಸ್ಪತ್ರೆ ಸೇರುವುದು ತಡವಾದಲ್ಲಿ ಅಥವಾ ಮರಣ ಹೊಂದಿದಲ್ಲಿ ಅವರ ಮೇಲೆ KPME Act ಅಡಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಕ್ರಮ ವಹಿಸಲು ಸೂಚಿಸಲಾಗಿದೆ.<br>• ಖಾಸಗಿ ಆಸ್ಪತ್ರೆಗಳಲ್ಲಿ ಮುಂಗಡ ಹಣಕ್ಕಾಗಿ ಒತ್ತಾಯಿಸದೆ ಹಾವು ಕಡಿತಗೊಂಡ ಸಂತ್ರಸ್ತರಿಗೆ ತಕ್ಷಣ ಜೀವ ಉಳಿಸುವ ಚಿಕಿತ್ಸೆಯನ್ನು ಒದಗಿಸುವಂತೆ ಆದೇಶಿಸಲಾಗಿದೆ.<br>• ಹಾವು ಕಡಿತ ಮತ್ತು ಮರಣಗಳನ್ನು ತಡೆಗಟ್ಟಲು ದೇಶದಲ್ಲೇ ಪ್ರಪ್ರಥಮ ಬಾರಿಗೆ ರಾಜ್ಯವು ವಿವಿಧ ಇಲಾಖೆಗಳು ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು ರಾಜ್ಯ ಕ್ರಿಯಾ ಯೋಜನೆಗೆ ದಿನಾಂಕ 27.02.2026 ರಂದು ಚಾಲನೆ ನೀಡಿ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿದೆ. |
| ಈ | ಯಾವ ಕಾಲಮಿತಿಯೊಳಗೆ ರಾಜ್ಯಾದ್ಯಂತ ಎಲ್ಲಾ ಮಟ್ಟದ ಆರೋಗ್ಯ ಕೇಂದ್ರಗಳಲ್ಲಿ ಹಾವು ಕಡಿತಕ್ಕೆ ಅಗತ್ಯವಿರುವ ಔಷಧ ಲಭ್ಯವಿರುವಂತೆ ಹಾಗೂ ಸಕಾಲದಲಿ ಮತ್ತು ತ್ವರಿತವಾಗಿ ಅಗತ್ಯ ಚಿಕಿತ್ಸೆ ದೊರೆಯುವಂತೆ ಮಾಡಲು ಕ್ರಮವಹಿಸಲಾಗುವುದೇ; | ರಾಜ್ಯದಲ್ಲಿ ಈಗಾಗಲೇ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ Anti Snake Venom (ASV) ಅನ್ನು ಸಾಕಷ್ಟು ದಾಸ್ತಾನು ಇರಿಸಿ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ. ರಾಜ್ಯದ ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳನ್ನು ಹಾವು ಕಡಿತ ಚಿಕಿತ್ಸಾ ಕೇಂದ್ರಗಳಾಗಿ ಗುರುತಿಸಲಾಗಿದ್ದು, ಈ ಆಸ್ಪತ್ರೆಗಳಲ್ಲಿ ದಿನದ 24 ಗಂಟೆಯೂ ಹಾವು ಕಡಿತಕ್ಕೆ ಚಿಕಿತ್ಸೆ ಹಾಗೂ ಕಡಿತದಿಂದ ಉಂಟಾಗುವ ಬೇರೆ ಬೇರೆ ತೊಂದರೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. |

**ಆಕುಕ 63 ಎಸ್‌ಎಂಎಂ 2026**

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಸಚಿವರು

| ಅನುಬಂಧ-1 | | | | | |
|---|---|---|---|---|---|
| **District wise Snakebite cases & deaths from 2024 & 2025**<br>**Data source IHIP portal** | | | | | |
| **Sl.No** | **District** | **2024 (Jan to Dec)** | | **2025 (Jan to Dec)** | |
| | | **Cases** | **Deaths** | **Cases** | **Deaths** |
| 1 | ULB-BBMP | 293 | 0 | 75 | 1 |
| 2 | Bagalkot | 371 | 6 | 586 | 4 |
| 3 | Ballari | 568 | 4 | 665 | 3 |
| 4 | Belagavi | 214 | 3 | 228 | 3 |
| 5 | Bengaluru Rural | 183 | 1 | 166 | 2 |
| 6 | Bengaluru Urban | 158 | 1 | 378 | 1 |
| 7 | Bidar | 126 | 3 | 245 | 3 |
| 8 | Chamarajanagar | 261 | 1 | 414 | 11 |
| 9 | Chikballapur | 813 | 1 | 944 | 6 |
| 10 | Chikkamagaluru | 362 | 3 | 580 | 2 |
| 11 | Chitradurga | 406 | 4 | 471 | 3 |
| 12 | Dakshin Kannad | 625 | 4 | 751 | 5 |
| 13 | Davangere | 759 | 0 | 781 | 10 |
| 14 | Dharwad | 397 | 2 | 566 | 10 |
| 15 | Gadag | 159 | 1 | 308 | 3 |
| 16 | Hassan | 850 | 2 | 860 | 2 |
| 17 | Haveri | 391 | 3 | 553 | 5 |
| 18 | Kalaburagi | 75 | 8 | 260 | 4 |
| 19 | Kodagu | 331 | 1 | 212 | 0 |
| 20 | Kolar | 382 | 3 | 300 | 0 |
| 21 | Koppal | 555 | 8 | 740 | 13 |
| 22 | Mandya | 763 | 5 | 799 | 4 |
| 23 | Mysuru | 790 | 4 | 833 | 8 |
| 24 | Raichur | 205 | 2 | 675 | 10 |
| 25 | Ramanagara | 232 | 0 | 312 | 5 |
| 26 | Shivamogga | 699 | 6 | 1002 | 9 |
| 27 | Tumakuru | 605 | 9 | 742 | 5 |
| 28 | Udupi | 438 | 1 | 568 | 5 |
| 29 | Uttar Kannad | 649 | 4 | 706 | 3 |
| 30 | Vijayanagar | 177 | 5 | 327 | 7 |
| 31 | Vijayapura | 326 | 2 | 601 | 7 |
| 32 | Yadgir | 72 | 3 | 157 | 0 |
| | **Total** | **13235** | **100** | **16805** | **154** |

Projcct Director (IDSP)
Directorate of Health & F.W Services
Arogya Soudha, Magadi Road,
Bengaluru- 560 023



File No. HFW/63/SMM/2026-HEALTH 1-HEALTH AND FAMILY WELFARE SEC (Computer No. 2102397)
Generated from eOffice by SATISH BAGAPPA HANGARAGI, HFW-ASST2(SBH), HEALTH1, ASSISTANT, HEALTH AND FAMILY WELFARE SEC on 23/02/2